ವಯಸ್ಸಲ್ಲೇ ಹುಲಿ ಅಟ್ಯಾಕ್ ಮಾಡಿದ್ದು ನಿಜ ಅನ್ನಿಸತ್ತಾ, ವಾಟ್ ಎ ಸ್ಟೋರಿ, ಅಪ್ಪ ಹೇಳಿದ್ರು, ನೀನು ನಂಬಿದೆ, ವಯಯೋಸಹಜವಾಗಿ ಮಂಡಿ ಸವೆದಿದೆ ಅಷ್ಟೇ. ರಿಪೋರ್ಟ್ ವಾಟ್ಸಾಪ್ ಮಾಡು, ನನಗೆ ಗೊತ್ತಿರೋ ಒಬ್ಬರು ಆರ್ಥೋ ಸರ್ಜನ್ ಹತ್ತಿರ ನಾನು ಮಾತಾಡ್ತೀನಿ, ಈ ಕತೇನ ಅಮ್ಮನ ಮುಂದೆ ಹೇಳಿಬಿಟ್ಟೀಯ' ಅಂತ ಎದ್ದು ಹೋದಳು. ಮಗನಿಗೆ ಅಪ್ಪ ಹಾಗೂ ತಂಗಿಯ ಮಾತಿನ ನಡುವೆ ಯಾವುದು ಸತ್ಯ ಅಂತ ಹೊಳೆಯಲಿಲ್ಲ.

***

ಏನೇನೋ ಟೆಸ್ಟ್‌ಗಳೆಲ್ಲ ನಡೆದು, ಕಡೆಗೂ ಸಿದ್ರಾಮನ ನೀ ರಿಪ್ಲೇಸ್‌ಮೆಂಟ್‌ಗೆ ದಿನಾಂಕ ನಿಗದಿಯಾಯಿತು. ಚೆನ್ನಾಗಿ ದುಡಿಯುವ ಮಕ್ಕಳಿರುವಾಗ ಅಪ್ಪಾಮ್ಮನ ಆರೋಗ್ಯಕ್ಕೆ ತುಸು ಹೆಚ್ಚೇ ಖರ್ಚು ಮಾಡುತ್ತಾರೆ. ಹಾಗಾಗಿ ದೊಡ್ಡ ಹಾಸ್ಪಿಟಲ್‌ನಲ್ಲೇ, ವಿಶೇಷ ಐಸಿಯೂ ವಾರ್ಡ್‌ನಲ್ಲೇ ಸಿದ್ರಾಮನನ್ನು ಸೇರಿಸಿದ್ದರು. ಹಾಗಾಗಿ ವಿಶೇಷ ಪ್ರಾಶಸ್ತ್ಯ ಸಿಗುತ್ತಿತ್ತು, ನಗುಮೊಗದ ಡಾಕ್ಟರ್‌ಗಳು, ನರ್ಸುಗಳು ಸೇರಿ ಇನ್ನೆರಡು ದಿನದಲ್ಲಿ ಇರೋದು ಮದುವೆಯೋ, ಸರ್ಜರಿಯೋ ತಿಳಿಯದಂತಾಗಿತ್ತು. ಸರ್ಜರಿಗೆ ಮೂರು ದಿನ ಮೊದಲೇ ಏನೇನೋ ಎಕ್ಸರ್ ಸೈಜು, ಏನೇನೋ ಮಾತ್ರೆಗಳು, ಏನೇನೋ ಟೆಸ್ಟುಗಳು ಸಿದ್ರಾಮನಿಗೆ ಇವೆಲ್ಲ ಹೊಸತು. ಕೊಂಚ ಭಯ, ಕೊಂಚ ಅಧೀರತೆ ಕಂಡು ಶ್ರೀಮತಿ ತಾನೇ ಜೊತೆಗಿರುತ್ತೇನೆ ಅಂತ ಉಳಿದುಕೊಂಡಳು.

ಆ ಮೂರು ದಿನಗಳೂ ಸಿದ್ರಾಮನಿಗೆ ಅದೆಂಥದೋ ಹೇಳಲಾಗದ ಭಯದ ಜೊತೆ ಅವರ್ಣನೀಯ ಸಂಭ್ರಮ. ಫೋನಿನಲ್ಲಿ ಏನೋ ತೋರಿಸಿ, ಶ್ರೀಮತಿಯನ್ನು ಕಿಚಾಯಿಸುತ್ತಿದ್ದ. ಇಬ್ಬರೇ ಏಕಾಂತದಲ್ಲಿದ್ದಾಗ ತಮ್ಮ ಮದುವೆಯ ಶುರು ಶುರುವಿನ ದಿನಗಳನ್ನು ಜ್ಞಾಪಕಕ್ಕೆ ತರಿಸಿ, ಅವಳು ನಾಚುವಂತೆ ಮಾಡುತ್ತಿದ್ದ, ಇರು ವಸ್ತ್ರಗಳನ್ನೆಲ್ಲ ತೆಗೆದು, ಮೊಣಕಾಲವರೆಗೆ ಇಳಿಬಿಟ್ಟ ನೀಲಿ ಗೌನಿನಲ್ಲಿ ಯಾವುದೋ ತನಗೆ ಪರಿಚಯ ಇಲ್ಲದ ಗಂಡಸಂತೆ ಸಿದ್ರಾಮ ಕಾಣುತ್ತಿದ್ದ. ಅವನ ನಗು, ಮಾತುಗಳೆಲ್ಲ ಹೆಚ್ಚುತ್ತಲೇ ಅವಳಿಗೂ ಅವನ ಮೇಲೆ ಯಾವುದೋ ಹೊಸ ಪ್ರೇಮ, ಸೆಳೆತ ಹುಟ್ಟುತ್ತಿತ್ತು.

ಮೊಣಕಾಲನ್ನು ಆಗಾಗ ನೀವಿಕೊಳ್ಳಬೇಕು, ಮಸಲ್ಸ್ ರಿಲ್ಯಾಕ್ಸ್ ಆಗಬೇಕು ಅಂತ ಡಾಕ್ಟರ್ ಹೇಳಿದ್ದರು, ಅದನ್ನೇ ತಾನೇ ಮಾಡ್ತಿದ್ದಿದ್ದು ಅಂತ ತಾನೇ ನೀವುಕೊಳ್ಳುವಾಗ 'ನಾನು ನೀವ್ತೀನಿ ಬಿಡಿ' ಅಂತ ಶ್ರೀಮತಿ ಗೌನಿನೊಳಗೆ ಕೈ ತೂರಿಸಿ ನೀವಿದಳು. ಕೊಂಚ ಮುಜುಗರವಾಗುತ್ತಲೇ, ಅರೆ ಹೆಂಡತಿ ನಾನು, ಅದೇನು ಸಂಕೋಚ ಅಂತ ಶ್ರೀಮತಿ ಕಣ್ಣಿನಲ್ಲೇ ಕಿಚಾಯಿಸಿದಳು. ಅದಕ್ಕವನು ಮೈಮರೆತು ಏನೋ ಹೇಳಿದ, ಅಲ್ಲಿವರೆಗೆ ನಗುತ್ತಿದ್ದ ಅವಳು ಥಟ್ಟನೆ ಮೌನವಾದಳು. ಕಣ್ಣು ತುಂಬಿ ಎದ್ದು, 'ಬಂದೆ' ಅಂತ ಹೊರಟಳು. ಎಲ್ಲಿಗೆ ಅಂತ ಕೇಳಿದ್ದಕ್ಕೆ, 'ಬಾತ್ ರೂಮಿಗೆ, ಇನ್ನೆಲ್ಲಿಗೆ, ನಾನೆಲ್ಲಿಗೆ ಹೋಗ್ತೇನೆ, ಅಷ್ಟು ಬೇಕಿದ್ದರೆ ನರ್ಸುಗಳಿದ್ದಾರಲ್ಲ, ಕರೀರಿ, ಸೇವೆ ಮಾಡ್ತಾರೆ' ಅಂತ ಹೇಳಿ ಹೋಗಿಬಿಟ್ಟಳು. ಎಷ್ಟು ಹೊತ್ತಾದರೂ ಬರಲೇ ಇಲ್ಲ. ಕೊಲ್ಲದೇ ಬಿಟ್ಟ ಕಾಡುಕೋಣ, ಹುಲಿ ಹಾಗೂ ಸಾಯದೇ ಬದುಕಿಸಿಯೂ, ಜೀವಂತ ಸಾಯಿಸುತ್ತಿರುವ ಈ ಮೊಣಕಾಲಿನ ಮೇಲೆ ವಿಪರೀತ ಕೋಪ ಬಂದುಬಿಟ್ಟಿತು. ಆ ರಾತ್ರಿ ಡಾಕ್ಟರ್ ಬಂದಾಗ 'ನನಗೆ ಈ ಸರ್ಜರಿ ಬೇಡ, ತನ್ನ ಏನು ಈ ವಯಸ್ಸಲ್ಲಿ ಸರ್ಜರಿ ಮಾಡಿ ಕೊಲ್ಲುತ್ತೀರಾ' ಅಂತ ಸಿದ್ರಾಮ ಜಗಳ ಆಡಿದ. ಮಕ್ಕಳಿಬ್ಬರೂ ಇಲ್ಲದಾಗ ಶ್ರೀಮತಿಗೆ ಗಂಡನನ್ನು ಹೇಗೆ ಸಂಭಾಳಿಸಬೇಕೋ ತಿಳಿಯದಾಯಿತು.

***

ಡಿಕ್ಲರೇಷನ್ ಫಾರ್ಮ್ ತುಂಬಿ, ಹೆಸರು ವಿಧಾತ, ಸಂಬಂಧ ಮಗ ಅಂತ ಬರೆದು ಸಹಿ ಮಾಡಿದ ಮುಕ್ಕಾಲು ಗಂಟೆಗೆ ಸಿದ್ರಾಮನನ್ನು ಸರ್ಜರಿಗೆ ಕರೆದೊಯ್ಯಲಾಯಿತು. ಎರಡು ಗಂಟೆ ಆದರೂ ತಗಲುತ್ತದೆ ಅಂತ ಡಾಕ್ಟರ್ ಹೇಳಿದ್ದರಿಂದ ಶ್ರೀಮತಿ ಮಂಕಾಗಿ ಕುಳಿತಿದ್ದಳು. ವಿಧಾತ ಕುಂಕುಮ ತಂದು ಅಮ್ಮ, ತಂಗಿಗೆ ಹಚ್ಚಿ, ತಾನೂ ಹಚ್ಚಿಕೊಂಡು ಅಮ್ಮನ ಕೈ ಹಿಡಿದುಕೊಂಡೇ ಕುಳಿತ. ಶ್ರೀಮತಿ 'ಶಾರ್ದೂಲೀ ಸ್ವೈರಿಭೀ ವ್ಯಾಘ್ರೀ ಹರಿಣೀ ಚ ಮೃಗೀ ಶುನೀ ಕಪಿರೂಪಾ ಚ ಗೋಘಂಟಾ ವಾನರೀ ...' ಅಂತ ಶ್ಲೋಕ ಪಠಣ ಮಾಡುತ್ತಾ ಕುಳಿತಳು.

ವ್ಯಾಘ್ರ ಅಂತ ಬಂದಾಗ ವ್ಯಾಘ್ರ ಅಂದರೆ ಹುಲಿ ತಾನೇ ಅಂತ ಮಗ ಕೇಳಿದ. ವೈಷ್ಣವಿ ಮತ್ತು ವಿಧಾತ ಇಬ್ಬರೂ ಮುಖ ಮುಖ ನೋಡಿಕೊಂಡರು. ಬೇಕಿತ್ತಾ ಅಂತ ಅಣ್ಣನ ಕಡೆ ತಂಗಿ ನೋಡಿದಳು. 'ನೀನು ಹೋಗಿ, ನಿನ್ನ ಪೆಂಡಿಂಗ್ ಕೆಲಸ ಮುಗುಸ್ಕೊಂಡು ಬಾ, ಆಪರೇಶನ್ ಮುಗಿದ ಮೇಲೆ ನಾನು ಶಿಫ್ಟ್‌ಗೆ ಹೋಗ್ಬೇಕು, ಆಗ ಅಮ್ಮನ ಜೊತೆ ನೀನಿರಬೇಕು, ಹೋಗು' ಅಂತ ಬಲವಂತವಾಗಿ ಅವಳನ್ನು ಕಳಿಸಿದ.

ನಿಟ್ಟುಸಿರು ಬಿಟ್ಟ ವಿಧಾತ, 'ತನ್ನ ಮೇಲೆ ಹುಲಿ ಅಟ್ಯಾಕ್ ಆಗಿದ್ದನ್ನ ಅಪ್ಪ ಯಾವತ್ತಾದರೂ ಹೇಳಿಕೊಂಡಿದ್ದರಾ' ಅಂತ ಕೇಳಿದ. ಸಹಸ್ರನಾಮ ಓದುವುದು ಬಿಟ್ಟು ಶ್ರೀಮತಿ ಮಗನ ಕಡೆಗೇ ನೋಡಿದಳು. 'ಅಜ್ಜನ ಹತ್ರ ನಾಡಕೋವಿ ಇತ್ತು, ಅದಕ್ಕೆ ಲೈಸೆನ್ಸ್ ಕೂಡ ಇತ್ತು. ಅಪ್ಪ ಸಣ್ಣೋರಾಗಿದ್ದಾಗ ಕಾಡಿಗೆ ಹೋಗ್ತಿದ್ರು ಅಂತನೂ ಡೀಟೆಲ್ ಕಲೆಕ್ಟ್ ಮಾಡಿದೆ, ಹುಲಿ ಅಟ್ಯಾಕ್ ಆಗಿತ್ತು, ಮೊಣಕಾಲ ಚಿಪ್ಪು ತಿಂದು ಹಾಕಿತ್ತು ಅಂತನೂ ಒಂದು ದಿನ ಹೇಳಿದ್ರು, ನಿಂಗೇನಾದ್ರೂ ಹೇಳಿದ್ರಾ' ಅಂತ ಮಗ ಕೇಳಿದ. ಶ್ರೀಮತಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ.

***

ಅಜ್ಜಿಯ ವೇಷ ಹಾಕಿಕೊಂಡ ಹುಡುಗನೊಬ್ಬ ಪ್ರಸ್ತದ ಕೋಣೆಗೆ ಅಡ್ಡ ಕುಳಿತು, ಒಳ ಬಿಡಲ್ಲ ಅಂತ ಅಡ್ಡಗಟ್ಟಿದ್ದ, ಮೊದಲು ಗಂಡು ಮಗನಾದರೆ ಇಷ್ಟು ದುಡ್ಡು, ಹೆಣ್ಣಾದರೆ ಇಷ್ಟು ದುಡ್ಡು ಕೊಡಬೇಕು ಅಂತ ಹಟ ಹಿಡಿದಿದ್ದ. ಆವತ್ತು ಸಿದ್ರಾಮ ಅದೆಷ್ಟು ಕೋಪಗೊಂಡು ಗಲಾಟೆ ಮಾಡಿದ್ದನೆಂದರೆ ಅವನಿಗೆ ಆಗುತ್ತಿರುವ ಕಿರಿಕಿರಿ ಸಿದ್ರಾಮನ ಕಣ್ಣಲ್ಲಿ ಜ್ವಲಿಸುತ್ತಿತ್ತು. ಶ್ರೀಮತಿ ಅವನ ಆರ್ಭಟಕ್ಕೆ ಬೆಚ್ಚಿಬಿದ್ದಿದ್ದಳು. ಗಲಾಟೆ ಮಾಡಿ, ದಂಪತಿಯನ್ನು ಕಾಡಲು ಬಂದವರೆಲ್ಲ ಆವತ್ತೇ ಹಿಂದೆ ಸರಿದು,




ಒಳಗೆ ಬಿಟ್ಟುಕೊಟ್ಟಿದ್ದರು. ಒಳಬಂದರೆ ಸಿದ್ರಾಮ ಕೋಪದಿಂದ ಮಲಗಿಬಿಟ್ಟ.

ಮೈಮುಟ್ಟಿ ನೋಡಿದರೆ ಸುಡುವ ಜ್ವರ. ಯಾರಿಗಾದರೂ ಹೇಳಲಾ ಅಂತ ಕೇಳಿದರೆ, 'ಸುಮ್ಮನಿರ್ತೀಯಾ, ಜ್ವರ ಅಂತ ಹೇಳ್ಬಿಡು, ಹೊರಗೆ ತಮಾಷೆ ಮಾಡುವವರಿಗೆ ಆಹಾರವಾಗೋಣ. ಹೇಳು, ಹೋಗಿ ಹೇಳು' ಅಂತ ಇನ್ನೂ ರೌದ್ರಾವತಾರ ತಾಳಿದ್ದ ಸಿದ್ರಾಮ. ಪಕ್ಕಕ್ಕೇ ಮುದುಡಿ, ಜ್ವರ ಹೆಚ್ಚುತ್ತಿದೆಯೇ ಅಂತ ರಾತ್ರಿ ಆಗಾಗ ಪರೀಕ್ಷಿಸುತ್ತಾ ಕಳೆದಿದ್ದಳು. ಮಧ್ಯರಾತ್ರಿ ಯಾವುದೋ ಸಮಯಕ್ಕೆ ಮೈ ಮೇಲೆ ಗಂಡನ ಕೈ ಸರಿದಾಡಿದಂತಾಗಿ, ಕಣ್ಬಿಟ್ಟರೆ ಸಿದ್ರಾಮ ಅವಳನ್ನು ತಬ್ಬಿಕೊಂಡು, ನಟರಾಜನ ಭಂಗಿಯಲ್ಲಿ ಅವರಿಬ್ಬರ ಪ್ರಥಮ ರಾತ್ರಿ ಜರುಗಿತ್ತು.

ಅದಾದ ಮೇಲೆ ಬಹುತೇಕ ವಿಚಿತ್ರ ರೀತಿಯ ಸಮಾಗಮಗಳೇ. ಮಕ್ಕಳಿಬ್ಬರ ಜನನಕ್ಕೆ ಸಾಕಾಗುವಷ್ಟು ಸಮಾಗಮನಗಳ ಹೊರತಾಗಿ ಗಂಡ ಹೆಂಡತಿ ಸಂಬಂಧ ಮುಂದುವರಿಯಲೇ ಇಲ್ಲ. ತೀರಾ ಪ್ರೀತಿಸುವ, ತೀರಾ ಕಾಳಜಿ ಮಾಡುವ, ತೀರಾ ಹುಲಿ ಮುದ್ದುಗರೆಯುವ ಸಿದ್ರಾಮನ ಮನಸ್ಸೊಳಗೆ ಏನು ನಡೆಯುತ್ತಿರಬಹುದು, ಯಾಕೋ ಒಂದು ಕಾಲಿಗಿಂತ ಮತ್ತೊಂದು ಚಿಕ್ಕದಿರಬಹುದೆಂಬ ಅನುಮಾನ ಬರುವಂತೆ ಯಾಕೆ ಕುಂಟುತ್ತಿರಬಹುದು, ಏನಾದರೂ ಐಬು ಇರಬಹುದೇ ಅಂತೆಲ್ಲ ಯೋಚನೆ ಮಾಡಿ, ನಿದ್ದೆ ಇಲ್ಲದ ರಾತ್ರಿ ಕಳೆದ ಶ್ರೀಮತಿ ವಯಸ್ಸಿಗೆ ಮೊದಲೇ ವಯಸ್ಸಾದವಳಂತೆ ಮುದುಡಿದ್ದಳು.

***

ಸಿದ್ರಾಮನನ್ನು ಅರ್ಧಕ್ಕೇ ಬಿಟ್ಟು ಹೋಗಿದ್ದ ಕಾಮ, ಹುಲಿ ಮತ್ತು ಕಾಡುಕೋಣಗಳಿಂದ ಸಾವು ಪೂರ್ತಿಯಾಗಿ ಕೊಂಡೊಯ್ದಿತು. ನೀ ರಿಪ್ಲೇಸ್‌ಮೆಂಟ್ ಯಶಸ್ವಿಯಾಗಿತ್ತಾದರೂ ಹೃದಯಸ್ತಂಭನವಾಗಿ ಸಿದ್ರಾಮನನ್ನು ಉಳಿಸಿಕೊಳ್ಳಲಾಗಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**